


International Journal of Kannada Research
www.kannadajournal.com

ISSN: 2454–5813
IJKR 2021; 7(2): 163-167
© 2021 IJKR
www.kannadajournal.com
Received: 04-02-2021
Accepted: 06-03-2021

**ಡಾ ರೂಪ ಎಂ.ಪಿ.**
ಕನ್ನಡ ಸಹಾಯಕ ಪ್ರಾಧ್ಯಾಪಕರು
ಸ.ಪ್ರ.ದ.ಮಹಿಳಾ ಕಾಲೇಜು,
ರಾಮನಗರ

**Corresponding Author:**
**ಡಾ ರೂಪ ಎಂ.ಪಿ.**
ಕನ್ನಡ ಸಹಾಯಕ ಪ್ರಾಧ್ಯಾಪಕರು
ಸ.ಪ್ರ.ದ.ಮಹಿಳಾ ಕಾಲೇಜು,
ರಾಮನಗರ

# ಆಧುನಿಕ ಕನ್ನಡ ಸಾಹಿತ್ಯದಲ್ಲಿ ಮಹಿಳಾ ಚಳುವಳಿ

**ಡಾ ರೂಪ ಎಂ.ಪಿ.**

ಪ್ರಕೃತಿಯಲ್ಲಿ ಸ್ತ್ರೀ–ಪುರಷ ಸೃಷ್ಟಿ ಕ್ರಿಯೆಯ ಸಚೇತನಗಳು. ಇಲ್ಲಿ ಯಾರೂ ಹೆಚ್ಚಲ್ಲ ಯಾರೂ ಕಡಿಮೆಯಲ್ಲ. ಇಬ್ಬರೂ ಪರಸ್ಪರ ಸಮಾನರೇ. ಸೃಷ್ಟಿ ಕ್ರಿಯೆಯ ಕಾರಣಕರ್ತರೂ ಹೌದು. ಮಾನವತಾವಾದವು ಹೇಳುವುದು ಇದನ್ನೇ. ನಾಗರೀಕ ಜಗತ್ತು ಮಾತ್ರ ಹೆಣ್ಣನ್ನು ಪುರುಷನ ಸರಿಸಮಾನಳೆಂದು ಎಂದೂ ನೋಡಿಲ್ಲ. ಇಲ್ಲಿ ಪುರುಷ ಮೇಲ್ದರ್ಜೆಯಲ್ಲಿಯೂ ಸ್ತ್ರೀ ದ್ವಿತೀಯ ದರ್ಜೆಯವಳಾಗಿಯೂ ಪರಿಗಣಿಸಲ್ಪಟ್ಟಿದ್ದಾಳೆ. ಎಲ್ಲಿ ಮೇಲು–ಕೀಳುಗಳೆಂಬ ತಾರತಮ್ಯಗಳು ಏರ್ಪಡುತ್ತವೆಯೋ ಅಲ್ಲಿ ಚಳುವಳಿಗಳು ಉದ್ಭವಿಸುತ್ತವೆ. ಶೋಷಿತ ವರ್ಗ ಶೋಷಕ ವರ್ಗದ ವಿರುದ್ಧ ಆಂದೋಲನಕ್ಕೆ ಸಜ್ಜಾಗುತ್ತದೆ.

### ಜಾಗತಿಕ ನೆಲೆಯಲ್ಲಿ ಮಹಿಳಾ ಚಳುವಳಿ

ಫ್ರಾನ್ಸ್, ಇಂಗ್ಲೆಂಡ್‌ನಂತರ ಐರೋಪ್ಯ ರಾಷ್ಟ್ರಗಳಲ್ಲಿ ನಡೆದ ಕ್ರಾಂತಿಯೇ ಪರೋಕ್ಷವಾಗಿ ಮಹಿಳಾ ಚಳುವಳಿಗೆ ಪ್ರೇರಣೆ ನೀಡಿತು. ಶೋಷಿತ ಕಾರ್ಮಿಕರು ಬಂಡವಾಳಷಾಹಿಗಳ ವಿರುದ್ಧ ನಡೆಸಿದ ಹೋರಾಟವೇ ಸ್ತ್ರೀಯರ ಚಳುವಳಿಗೆ ದಾರಿ ಮಾಡಿಕೊಟ್ಟಿತು. ತಮಗಾಗುತ್ತಿರುವ ಅನ್ಯಾಯಗಳ ಅರಿವೇ ಇಲ್ಲದೆ ಬದುಕುತ್ತಿರುವ ಮಹಿಳೆಯರ ವಿಮೋಚನೆಯ ಬಗೆಗೆ ಮೊದಲಿಗೆ ಫ್ರಾನ್ಸಿನ ಜಾಗೃತ ಮಹಿಳೆಯರು ಚಿಂತಿಸಿದರು. ಹೆಣ್ಣು ಕೇವಲ ಕಾಮಕ್ಕೆ ಮತ್ತು ಕೌಟುಂಬಿಕ ಕಾರ್ಯಕ್ಕಷ್ಟೆ ಸೀಮಿತ ವಸ್ತುವಾಗಿ ಬಾಹ್ಯ ಪ್ರಪಂಚದಲ್ಲಿ ವ್ಯಕ್ತಿತ್ವ ಹೀನಳಾಗಿ ಬಾಳುತ್ತಿರುವುದು ಪ್ರೆಂಚ್ ಚಿಂತಕಿಯರನ್ನು ಬಡಿದೆಬ್ಬಿಸಿತು. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಹೆಣ್ಣು ಸ್ವಾತಂತ್ರ್ಯವನ್ನು ಕಳೆದುಕೊಂಡು ಕೌಟುಂಬಿಕವಾಗಿ ಪುರುಷನ ದೌರ್ಜನ್ಯಕ್ಕೆ ಒಳಗಾಗಿರುವುದನ್ನು ಈ ಮಹಿಳೆಯರು ಅರ್ಥ ಮಾಡಿಕೊಂಡರು.

ರಾಜಕೀಯವಾಗಿ ಮತದಾನದ ಹಕ್ಕು, ಆರ್ಥಿಕವಾಗಿ ಸಮಾನ ವೇತನ, ಶೈಕ್ಷಣಿಕವಾಗಿ ಸ್ತ್ರೀಶಿಕ್ಷಣ, ಕೌಟುಂಬಿಕವಾಗಿ ಸಮಾನತೆ ಮೊದಲಾದ ವಿಷಯಗಳಿಗಾಗಿ ಮಹಿಳೆಯರೆಲ್ಲ ಒಗ್ಗೂಡಿ ಹೋರಾಟಕ್ಕೆ ನಿಂತರು. ತ'ಮ್ಮ ಹೀಗಿರುವ ಸ್ಥಿತಿಗೆ ಪುರುಷ ಪ್ರಧಾನ ವ್ಯವಸ್ಥೆಯೇ ಕಾರಣ ಎಂದರಿತರು. ಈ ಚಳುವಳಿಗೆ ಫ್ರಾನ್ಸ್ ಚಿಂತಕಿಯರ ಕೃತಿಗಳು ಪ್ರೇರಣೆ ನೀಡಿದವು. ಮೇರಿವುಲ್‌ಸ್ಟನ್ ಕ್ರಾಫ್ಟ್ ಎಂಬ ಚಿಂತಕಿಯ 'The Vindication of the Rights of women' ಸ್ತ್ರೀಯರ ಹಕ್ಕುಗಳೇನು ಎಂಬುದನ್ನು ಚರ್ಚಿಸುತ್ತದೆ. ಸಿಮೋನ್ ದಿ ಬೋವಾಳ 'ಖ್ಜಿಜ ಖ್ಖುಳಿತುಜ ಖ್ಖುಫ' ಎಂಬ ಕೃತಿಯು ಸ್ತ್ರೀಯ ಬಂಧನಕ್ಕೆ ಕಾರಣಗಳೇನು? ಎಂಬುದನ್ನು ಮನೋವಿಶ್ಲೇಷಣಾತ್ಮಕ ನೆಲೆಯಲ್ಲಿ ಚರ್ಚಿಸುತ್ತದೆ. ಹೆಣ್ಣು ತನ್ನ ಮನಸ್ಸಿನ ಭಾವನೆಗಳನ್ನು ಅಭಿವ್ಯಕ್ತಿಸಲು ಅವಳದೇ ಆದ ಒಂದು ಕೊಠಡಿ (ಸ್ವತಂತ್ರತೆ) ಇರಬೇಕು ಎಂದು ವರ್ಜಿನಿಯಾ ವುಲ್ಫ್ ತನ್ನ (A Room of one's own) ಕೃತಿಯಲ್ಲಿ ಚರ್ಚಿಸುತ್ತಾಳೆ. ಕೇಟ್ ಮಿಲ್ಲೆಟಳ 'Sexual Politics' ಕೃತಿಯು ಸ್ತ್ರೀ–ಪುರುಷರ ನಡುವಿನ ಅಧಿಕಾರದ ರಾಜಕಾರಣವನ್ನು ಚರ್ಚಿಸುತ್ತದೆ. ಹೆಣ್ಣು ಶ್ರೀಮಂತಳಿರಲಿ, ಬಡವಳೇ ಆಗಿರಲಿ ಯಾವ ಧರ್ಮ ಜಾತಿಯವಳೇ ಆಗಿದ್ದರೂ ಎಲ್ಲಾ ಮಹಿಳೆಯರೂ ಪುರುಷ ಪ್ರಧಾನ ವ್ಯವಸ್ಥೆಯಡಿಯಲ್ಲಿ ಶೋಷಿತರೇ ಎಂಬುದನ್ನು ಇವರ ಕೃತಿಗಳು ತೋರಿಸಿದವು. ಹೀಗಾಗಿ ಫ್ರಾನ್ಸ್, ಅಮೇರಿಕಾ, ಇಂಗ್ಲೆಂಡ್, ಜರ್ಮನಿ ಮೊದಲಾದ ದೇಶಗಳಲ್ಲಿ ಚಳುವಳಿ ಮುಂದುವರೆದು ಮಹಿಳಾ ಜಾಗೃತಿ ಉಂಟಾಯಿತು. ಹಲವು ಸ್ತ್ರೀವಾದೀ' ಚಳುವಳಿಗಳು ಆರಂಭವಾಗಿ ಮಹಿಳಾ ವಿಮೋಚನೆಗೆ, ಜಾಗೃತಿಗೆ ದಾರಿ ಮಾಟಿಕೊಟ್ಟವು. ಈ ಹಿನ್ನೆಲೆಯಲ್ಲಿ ಪ್ರತೀ ವರ್ಷ ಮಾರ್ಚ್ ಎಂಟು ಮಹಿಳಾ

ದಿನಾಚರಣೆಯನ್ನಾಗಿ ನಾವು ಆಚರಿಸುತ್ತಿದ್ದೇವೆ. ಹತ್ತೊಂಬತ್ತು ಮತ್ತು ಇಪ್ಪತ್ತನೇ ಶತಮಾನದಲ್ಲಿ ಆರಂಭವಾದ ಮಹಿಳಾ ಚಳುವಳಿಯು ಭಾರತೀಯರ ಮೇಲೂ ತನ್ನದೇ ಆದ ಪ್ರಭಾವವನ್ನು ಬೀರಿತು.

**ಭಾರತೀಯ ಸಮಾಜದಲ್ಲಿ ಜಾಗೃತಗೊಂಡ ಮಹಿಳೆ**

ಭಾರತೀಯ ಮಹಿಳಾ ಚಳುವಳಿಗೆ ಪ್ರೇರಣೆ ನೀಡಿದ್ದು ಅಂತರಾಷ್ಟ್ರೀಯ ಮಹಿಳಾ ಆಂದೋಲನ. ಫ್ರಾನ್ಸ್, ಅಮೇರಿಕಾ ಇಂಗ್ಲೆಂಡ್ ಮೊದಲಾದ ದೇಶಗಳಲ್ಲಿ ಮಹಿಳಾ ಪರ ಚಳುವಳಿಗಳು ಮುಂಚೂಣಿಯಲ್ಲಿದ್ದು, ಕಾರ್ಲ್‌ಮಾರ್ಕ್ಸ್, ಏಂಗೆಲ್ಸ್ ಮೊದಲಾದ ರಾಜಕೀಯ ಧುರೀಣರ ಬೆಂಬಲವು ಸ್ತ್ರೀಯರಿಗಿತ್ತು. ಹಲವು ಮಹಿಳಾ ಚಿಂತಕಿಯರು ಸ್ತ್ರೀವಾದವನ್ನು ಸೈದ್ಧಾಂತಿಕ ನೆಲೆಯಲ್ಲಿ ಚರ್ಚಿಸಿ ಕಾರ್ಯೋನ್ಮುಖಗೊಳಿಸಿದರು.

ಭಾರತೀಯ ಮಹಿಳೆಯರು ಅಶಿಕ್ಷಿತರು. ಅವರಿಗೆ ಸ್ವತಂತ್ರ ಬದುಕಾಗಲೀ ಆಲೋಚನೆಯಾಗಲೀ ಇರಲಿಲ್ಲ. ಅವರು ಚಿಕ್ಕಂದಿನಲ್ಲಿ ತಂದೆಯ ಆಶ್ರಯದಲ್ಲಿ, ಮದುವೆಯಾದ ಮೇಲೆ ಗಂಡನ ಆಶ್ರಯದಲ್ಲಿ ಮತ್ತು ವೃದ್ಧಾಪ್ಯದಲ್ಲಿ ಮಗನ ಆಶ್ರಯದಲ್ಲಿ ಜೀವಿಸಬೇಕೆಂಬ ಕಟ್ಟಳೆಗೆ ಒಳಗಾಗಿದ್ದರಿಂದ ಅಡುಗೆ ಮನೆ ಮತ್ತು ಕುಟುಂಬ ನಿರ್ವಹಣೆಯೇ ಅವಳ ಬದುಕಾಗಿತ್ತು. ಹೊರಗಿನ ಪ್ರಪಂಚಕ್ಕೆ ಅವಳು ಅಂಧಳಾಗಿದ್ದಳು. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯವಾಗಿ ಪುರುಷ ಮೇಲುಗೈ ಸಾಧಿಸಿದ್ದ. ಬಾಹ್ಯ ಪ್ರಪಂಚದ ಅಧಿಪತಿಯಾಗಿದ್ದ. ಕುಟುಂಬದಲ್ಲಿ ಯಜಮಾನನಾಗಿದ್ದ. ಇದಕ್ಕೆ ತದ್ವಿರುದ್ಧವಾಗಿ ಸ್ತ್ರೀ ಸಾಮಾಜಿಕ, ಧಾರ್ಮಿಕ ಕಟ್ಟುಪಾಡುಗಳಿಗೆ ಬದ್ಧಳಾಗಿ ವ್ಯಕ್ತಿತ್ವ ಹೀನಳಾಗಿ ಜೀವಿಸುತ್ತಿದ್ದಳು.

ಭಾರತೀಯ ಸಮಾಜವು ಸ್ತ್ರೀಯನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳುವಲ್ಲಿ ಯಶಸ್ವಿಯಾಗಿತ್ತು. ಮಾತ್ರವಲ್ಲದೆ ಸ್ತ್ರೀಯರನ್ನು ಅತ್ಯಂತ ಅಮಾನವೀಯ ರೀತಿಯಲ್ಲಿ ನಡೆಸಿಕೊಳ್ಳುತ್ತಿತ್ತು. ಸ್ತ್ರೀಯ 'ಪಾತಿವ್ರತ್ಯ'ಕ್ಕೆ ಹೆಚ್ಚಿನ ಮನ್ನಣೆ ನೀಡಿದ ಈ ಸಮಾಜ ಗಂಡ ಸಾಯುತ್ತಿದ್ದಂತೆ ಹೆಂಡತಿಯೂ ಸಾಯಬೇಕೆಂಬ ಕಟ್ಟಳೆಯನ್ನು ವಿಧಿಸಿತ್ತು. ಹೆಣ್ಣು ಚಿಕ್ಕವಳಿರುವಾಗಲೇ ಮದುವೆ ಮಾಡಲಾಗುತ್ತಿತ್ತು. ಒಂದು ವೇಳೆ ಗಂಡ ಸತ್ತರೆ ವಿಧವೆಯಾಗಿ ಎಲ್ಲಾ ಕೆಲಸವನ್ನು ಎತ್ತಿನಂತೆ ದುಡಿಯುತ್ತ ಯಾವುದೋ ಮೂಲೆಯಲ್ಲಿ ಯಾರಿಗೂ ಬೇಡದವಳಾಗಿ ಜೀವಿಸಬೇಕಿತ್ತು.

ಭಾರತದಲ್ಲಿ ಬ್ರಿಟಿಷರ ಆಳ್ವಿಕೆಯ ಸಂದರ್ಭದಲ್ಲಿ ಸಾಂಪ್ರದಾಯಿಕ ಶಿಕ್ಷಣದಿಂದ ಬ್ರಿಟಿಷ್ ಶಿಕ್ಷಣಕ್ಕೆ ತೆರೆದುಕೊಂಡ ಮೊದಲ ತಲೆಮಾರಿನ ಪ್ರಮುಖ ಸುಧಾರಣಾಕಾರರಾದ ರಾಜರಾಮ್ ಮೋಹನ್‌ರಾಯ್, ಈಶ್ವರ ಚಂದ್ರ ವಿದ್ಯಾಸಾಗರ್, ಜ್ಯೋತಿರಾವ್ ಫುಲೆ, ಮಹರ್ಷಿಕರ್ವೆ ಮೊದಲಾದವರು ಬ್ರಿಟಿಷರ ಸಹಯೋಗದೊಂದಿಗೆ ಸ್ತ್ರೀಯರ ಮೇಲೆ ಹೇರಲಾಗಿದ್ದ ಅಮಾನವೀಯ ಪದ್ಧತಿಗಳನ್ನು ತೊಡೆದು ಹಾಕಲು ಯತ್ನಿಸಿದರು. ಸತೀ ಪದ್ಧತಿ, ಸ್ತ್ರೀ ಶಿಶುಹತ್ಯೆ, ಬಾಲ್ಯ ವಿವಾಹ, ವಿಧವಾ ವಿವಾಹ ನಿಷೇಧ ಪದ್ಧತಿಗಳ ವಿರುದ್ಧ ದನಿಯೆತ್ತಿದರು. ಈ ಆರಂಭಿಕ ಹೆಜ್ಜೆಗಳೇ ಮುಂದೆ ಸ್ತ್ರೀ ಜಾಗೃತಿಗೆ ಅವಳ ವಿಮೋಚನೆಗೆ ದಾರಿ ಮಾಡಿಕೊಟ್ಟಿತು. ರಾಷ್ಟ್ರೀಯತೆಯ ಸಂದರ್ಭದಲ್ಲಿ ಸ್ತ್ರೀಯರ ಸಾಮರ್ಥ್ಯವೇನೆಂಬುದರ ಅರಿವಿದ್ದ ಗಾಂಧೀಜಿಯವರು ಸ್ತ್ರೀಯರೆಲ್ಲ ಒಟ್ಟಾಗಿ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಲು ಕರೆ ನೀಡಿದ್ದರು. ಸ್ತ್ರೀಯರು ಸಮಾಜಮುಖಿಯಾಗಿ ತೆರೆದುಕೊಳ್ಳಲು ಇದು ಮತ್ತೊಂದು ಹೆಜ್ಜೆಯಾಯಿತು. ಮುಂದೆ ಸ್ತ್ರೀಯರಿಗೆ ದೊರೆತ ಶಿಕ್ಷಣವು ನಿಧಾನವಾಗಿ ತಮ್ಮ ಬದುಕನ್ನು ಅರ್ಥ ಮಾಡಿಕೊಳ್ಳಲು ದಾರಿ ಮಾಡಿಕೊಟ್ಟಿತು.

ಇಪ್ಪತ್ತನೇ ಶತಮಾನದ ಆರಂಭದಲ್ಲಿಯೇ ಭಾರತದಲ್ಲಿ ಸ್ತ್ರೀ ಪರ ಚಿಂತನೆಗಳು ಮೊಳೆಯ ತೊಡಗಿದ್ದವು. ಮುಖ್ಯವಾಗಿ ಪಂಡಿತ ರಮಾಬಾಯಿ, ಆನಂದೀಬಾಯಿ, ರಮಾಬಾಯಿ ರಾನಡೆ, ರುಕ್ಮಾಬಾಯಿ, ವಿದೇಶಿ ಮಹಿಳೆಯರಾದ ಆ್ಯನಿಬೆಸೆಂಟ್, ಮಾರ್ಗರೇಟ್ ಕಸಿನ್ಸ್ ಮೊದಲಾದವರು ಮಹಿಳೆಯರ ಪರ ದ'ನಿಯೆತ್ತಿದ್ದರು. ೧೯೨೫ ರಲ್ಲಿ 'The National Council of Women in India' ಎಂಬ ಸಂಸ್ಥೆ ಅಖಿಲ ಭಾರತ ಮಟ್ಟದಲ್ಲಿ ಎಲ್ಲಾ ಮಹಿಳೆಯರನ್ನು ಒಂದೆಡೆ ತರುವ ಪ್ರಯತ್ನಕ್ಕೆ ಕೈಹಾಕಿತು. ಸ್ತ್ರೀದರ್ಪಣ (೧೯೦೯), ಕುಮಾರಿ ದರ್ಪಣ ಗೃಹಲಕ್ಷ್ಮಿ, ಆರ್ಯ ಮಹಿಳಾ ಮೊದಲಾದ ಪತ್ರಿಕೆಗಳು ಮಹಿಳಾ ಬದುಕನ್ನು ಆಧರಿಸಿ ಬರೆಯ ತೊಡಗಿದವು. ಭಾರತದಲ್ಲಿ ಮಹಿಳಾ ಚಳುವಳಿ ಹಂತ ಹಂತವಾಗಿ ಬೆಳೆಯುತ್ತಾ ಹೋಯಿತು. ೧೯೨೭ ರಲ್ಲಿ ಅಖಿಲ ಭಾರತ ಮಹಿಳಾ ಸಮ್ಮೇಳನದ ಮೊದಲ ಅಧ್ಯಕ್ಷೆಯಾಗಿ ಚಿಮಣಾಬಾಯಿಗಾಯಕವಾಡರು ಕಾರ್ಯ ನಿರ್ವಹಿಸಿದರು. ಸರೋಜಿನಿನಾಯ್ಡು, ಕಮಲಾದೇವಿ ಚಟ್ಟೋಪಧ್ಯಾಯ, ಡಾ॥ ಮುತ್ತುಲಕ್ಷ್ಮಿರೆಡ್ಡಿ, ರಾಮೇಶ್ವರಿ ನೆಹರು, ಬೇಗಂ ಹಮೀದ್ ಅಲಿ ಮೊದಲಾದ ಮಹಿಳೆಯರು ಚಳುವಳಿಯ ಶಕ್ತಿಗಳಾಗಿದ್ದರು. ಸುಭಾಷ್‌ಚಂದ್ರ ಬೋಸ್‌ರಿಂದ ಸ್ಥಾಪನೆಯಾದ 'ಝಾನ್ಸಿರಾಣಿ ಬ್ರಿಗೇಡ್' ಸೇನೆಗೆ ಕ್ಯಾಪ್ಟನ್ ಲಕ್ಷ್ಮಿಸ್ವಾಮಿನಾಥನ್ ಮುಖ್ಯಸ್ಥರಾಗಿ ಮಹಿಳಾ ಪರ ಹೋರಾಟದಲ್ಲಿ ತೊಡಗಿಸಿಕೊಂಡರು. ಭಾರತದ ರಾಷ್ಟ್ರೀಯ ಚಳುವಳಿಯು ಮಹಿಳಾ ಚಳುವಳಿಗೆ ಪ್ರೇರಣೆ ನೀಡಿತು. ಭಾರತೀಯ ಮಹಿಳೆಯರ ಹೋರಾಟದ ಫಲವಾಗಿ ಎಚ್ಚೆತ್ತ ಸರ್ಕಾರ ೧೯೭೦–೮೦ ರ ದರ್ಶಕವನ್ನು ಮಹಿಳಾ ಯೋಜನೆಗಳ ಅಭಿವೃದ್ಧಿ ದಶಕವೆಂದು ಕರೆಯಿತು.

**ನವೋದಯ, ಪ್ರಗತಿಶೀಲ ಮತ್ತು ನವ್ಯ ಸಾಹಿತ್ಯದಲ್ಲಿ ಮಹಿಳಾ ಸಂವೇದನೆ**

**ನವೋದಯ:** ಈ ಕಾಲಘಟ್ಟವು ಇಂಗ್ಲೀಷ್ ಶಿಕ್ಷಣ ಪಡೆದ ಮೊದಲ ತಲೆಮಾರಿನ ಸಾಹಿತಿಗಳಿಂದ ರಚಿತವಾದದ್ದು. ಈ ಸಂದರ್ಭದಲ್ಲಿ ಭಾರತೀಯ ಮಟ್ಟದಲ್ಲಿ ಸ್ತ್ರೀಪರ ಚರ್ಚೆಗಳು ನಡೆಯುತ್ತಿದ್ದದ್ದು ಕನ್ನಡ ಲೇಖಕರನ್ನು ಪ್ರಭಾವಿಸಿದವು. ಮಹಿಳಾ ವಿಷಯಕ್ಕೆ ಸಂಬಂಧಿಸಿದಂತೆ ತಮ್ಮ ನಿಲುವುಗಳನ್ನು ಸಾಹಿತ್ಯದ ಮೂಲಕವೇ ಅಭಿವ್ಯಕ್ತಿಸಿದರು. ಕನ್ನಡದ ಮೊದಲ ಸಾಮಾಜಿಕ ಕಾದಂಬರಿಯಾದ ಗುಲ್ವಾಡಿ ವೆಂಕಟರಾಯರ 'ಇಂದಿರಾಬಾಯಿ' ಸ್ತ್ರೀಪರ ದನಿಯನ್ನು ಒಳಗೊಂಡಿದೆ. ಈ ಕೃತಿಯು ಸ್ತ್ರೀಶಿಕ್ಷಣಕ್ಕೆ, ವಿಧವಾ ಪುನರ್ ವಿವಾಹಕ್ಕೆ ಮನ್ನಣೆ ನೀಡಿದೆ. ನಂತರ ಬಂದ ಕೆರೂರು ವಾಸುದೇವಾಚಾರ್ಯರ 'ಇಂದಿರಾ' ಕಾದಂಬರಿಯು ಸ್ತ್ರೀಯರ ಸಾಂಪ್ರದಾಯಿಕ ಜೀವನಕ್ಕೆ ಒತ್ತು ನೀಡುತ್ತದೆ. ಬೋಳಾರ ಬಾಬುರಾವ್, ಎಂ.ಎಸ್. ಪುಟ್ಟಣ್ಣ, ಮಾಸ್ತಿಯವರ ಬರವಣಿಗೆಗಳು ಕೂಡ 'ಹೆಣ್ಣಿನ ವಿಷಯದಲ್ಲಿ ಸಾಂಪ್ರದಾಯಿಕ ಧೋರಣೆಯನ್ನು ಪ್ರತಿನಿಧಿಸುತ್ತವೆ.

ನವೋದಯದ ಕವಿತೆಗಳು ಸಹ ಹೆಣ್ಣು ಮಾತೃ ಸ್ವರೂಪಿಣಿಯಾಗಿ, ಸಹನಾಮಯಿಯಾಗಿ, ಕ್ಷಮಯಾಧರಿತ್ರಿಯಾಗಿ ಬಾಳುವುದಕ್ಕೆ ಒತ್ತು ನೀಡುತ್ತವೆ. ಈ ಕಾಲಘಟ್ಟದಲ್ಲಿ ಸ್ತ್ರೀಪರ ಅನುಕಂಪವಿದ್ದರೂ ಅದು ಒಂದು ಧ್ವನಿಯಾಗಿ ಹೊರ ಹೊಮ್ಮಲಿಲ್ಲ. ಅಲ್ಲಲ್ಲಿ ಹೆಣ್ಣಿನ ಸಮಸ್ಯೆಗಳ ಬಗ್ಗೆ ಚರ್ಚಿಸಿದರೂ ಸಹ ಅವು ಪ್ರಶ್ನೆಗಳಾಗಿ ಮೇಲೇಳುವುದಿಲ್ಲ.

ಕಾನೂರು ಹೆಗ್ಗಡತಿ, ಮಲೆಗಳಲ್ಲಿ ಮದುಮಗಳು, ಮರಳಿ ಮಣ್ಣಿಗೆ, ಸರಸಮ್ಮನ ಸಮಾಧಿ, ನಿಸರ್ಗ, ಗ್ರಾಮಾಯಣ, ಹೇಮಾವತಿ, ಊರ್ವಶಿ ಮೊದಲಾದ ಕಾದಂಬರಿಗಳಲ್ಲಿ ಹೆಣ್ಣಿನ ಕೌಟುಂಬಿಕ, ಮಾನಸಿಕ ಮತ್ತು ಸಾಮಾಜಿಕ ಸಮಸ್ಯೆಗಳ

ಅನಾವರಣವಿದ್ದರೂ ಆ ಸಮಸ್ಯೆಗಳಿಗೆ ಮೌನವೇ ಉತ್ತರವಾಗಿದೆ. ಹೆಣ್ಣು ಕೌಟುಂಬಿಕ ಜೀವನದ ಒಳಿತಿಗಾಗಿ, ತನ್ನ ಪಾತಿವ್ರತ್ಯಕ್ಕಾಗಿ ಶ್ರಮಿಸುವುದೇ ಅವಳ ಜೀವನದ ಪರಮ ಗುರಿಯಾಗಬೇಕೆಂದು ಅದರಲ್ಲಿಯೇ ಅವಳ ಸಾರ್ಥಕತೆಯಿದೆ ಎಂಬುದು ಈ ಕಾಲಘಟ್ಟದ ಬಹುಪಾಲು ಸಾಹಿತ್ಯದ ಧೋರಣೆಯಾಗಿತ್ತು. 'ಗ್ರಾಮಯಣ' ಕಾದಂಬರಿಯ ಚಿಮಣಾ ವಿವಾಹಪೂರ್ವದಲ್ಲಿಯೇ ತನ್ನ ಪವಿತ್ರತೆಯನ್ನು ಕಳೆದುಕೊಂಡುದಕ್ಕಾಗಿ ಇಡೀ ಜೀವಮಾನ ಅವಮಾನದಿಂದ ಕತ್ತಲ ಕೂಪದೊಳಗೆ ಬೆಂದು ಹೊರ ಬರುವ ದಾರಿ ತಿಳಿಯದೆ ಆತ್ಮಹತ್ಯೆಗೆ ಶರಣಾಗುತ್ತಾಳೆ. ಗ್ರಾಮಯಣದ ಪುತಳಾಬಾಯಿ, ನಿಸರ್ಗ ಕಾದಂಬರಿಯ ತಾರ, ಕಾನೂರು ಹೆಗ್ಗಡತಿಯ ಸುಬ್ಬಮ್ಮ ಪಾತ್ರಗಳು ವಿವಾಹದ ನಂತರದಲ್ಲಿ ಅನ್ಯ ಸಂಬಂಧವನ್ನು ಹೊಂದಿದ್ದ ಕಾರಣಕ್ಕಾಗಿ ಮಾನಸಿಕ ತೊಳಲಾಟಕ್ಕೆ ಗುರಿಯಾಗಿ ಅಂತಿಮವಾಗಿ ಆತ್ಮಹತ್ಯೆಗೆ ಶರಣಾಗುತ್ತಾರೆ. ಪಾತಿವ್ರತ್ಯ ಕಳೆದುಕೊಂಡ ಮಹಿಳೆಯರಿಗೆ ಸಮಾಜದಲ್ಲಿ ಬದುಕುವ ನೈತಿಕ ಹಕ್ಕಿಲ್ಲವೆಂಬುದನ್ನು ಈ ಪಾತ್ರಗಳು ಒಪ್ಪಿ ದುರಂತಕ್ಕೊಳಗಾಗುವುದನ್ನು ಕಾಣುತ್ತೇವೆ. ಎಂತಹ ಪರಿಸ್ಥಿತಿಯಿದ್ದರೂ, ಎಂತಹ ಸನ್ನಿವೇಶ ಎದುರಾದರೂ ಹೆಣ್ಣು ಪಾತಿವ್ರತ್ಯವನ್ನು ಕಳೆದುಕೊಳ್ಳಬಾರದು ಎಂಬುದನ್ನು ಮಾಸ್ತಿಯವರ ಆಚಾರ್ಯರ ಪತ್ನಿ' ಕತೆಯು ಮತ್ತು ಎಂ.ಎಸ್ ಪುಟ್ಟಣ್ಣನವರ ಮಾಡಿದುಣ್ಣೋ ಮಹಾರಾಯ' ಕಾದಂಬರಿಗಳು ಚಿತ್ರಿಸುತ್ತವೆ.

ಶಿವರಾಮ ಕಾರಂತರ 'ಸರಸಮ್ಮನ ಸಮಾಧಿ' ಕಾದಂಬರಿಯು ಆಧುನಿಕ ತಲೆಮಾರಿನ ಹೆಣ್ಣು ಮಕ್ಕಳು ಸಾಂಪ್ರಾದಾಯಿಕ ಜೀವನ ಮಾದರಿಯನ್ನು ಪ್ರಶ್ನಿಸಿ ತಮ್ಮದೆ ಆದ ಹೊಸ ಬದುಕನ್ನು ಕಟ್ಟಿಕೊಳ್ಳುವಲ್ಲಿ ಯಶಸ್ವಿಯಾಗುತ್ತವೆ. ಅಣ್ಣಪ್ಪ ಕಮ್ತಿಯವರ ಹೆಂಡತಿ ಸುನಾಲಿನಿ ಗಂಡನ ಪ್ರೀತಿಯಿಂದ ವಂಚಿತಳಾಗಿ ಅಡಾಉಡಿ ಚಂದ್ರಯ್ಯನನ್ನು ವಿವಾಹವಾಗುತ್ತಾಳೆ. ಮಾವನ ಮನೆಯಲ್ಲಿ ಸೊಸೆಯನ್ನು ಕೀಳಾಗಿ ನೋಡುವ ಮನೋಭಾವವನ್ನು ಧಿಕ್ಕರಿಸಿ ಭಾಗಿರಥಿ ತಂದೆಯ ಆಶ್ರಯದಲ್ಲಿದ್ದುಕೊಂಡು ತನ್ನ

ಗಂಡ ಹಿರಣ್ಯನಿಗೆ ತಕ್ಕ ಪಾಠ ಕಲಿಸುತ್ತಾಳೆ. ವಿದ್ಯೆ ಕಲಿತ ಹೆಣ್ಣುಗಳ ಹೊಸ ತಲೆಮಾರಿನ ಆಶಯಗಳಿಗೂ, ಪರಂಪರಾಗತವಾಗಿ ಬೆಳೆದು ಬಂದ ಪುರುಷಪರ ಆಲೋಚನೆಗಳಿಗೂ ಘರ್ಷಣೆಯೇರ್ಪಡುವುದನ್ನು ನಾವಿಲ್ಲಿ ಕಾಣುತ್ತೇವೆ.

ತಿರುಮಲಾಂಬ, ಆರ್.ಕಲ್ಯಾಣಮ್ಮನವರು ನವೋದಯದ ಆರಂಭದಲ್ಲಿಯೇ ಬರವಣಿಗೆಯನ್ನು ಪ್ರಾರಂಭಿಸಿದ್ದರೂ ಇವರ ಬರವಣಿಗೆಗಳು ಸಮಾಜದ ಕಟ್ಟುಪಾಡುಗಳನ್ನು ಪ್ರಶ್ನಿಸುವ ಹಂತಕ್ಕೆ ಬೆಳೆದಿರಲಿಲ್ಲ. ಬದಲಾಗಿ ಬಾಲ್ಯವಿವಾಹ, ವರದಕ್ಷಿಣೆ, ಸ್ತ್ರೀವಿದ್ಯಾಭ್ಯಾಸ ಮೊದಲಾದ ಅಂಶಗಳ ಕಡೆಗೆ ಸಮಾಜದ ಗಮನ ಸೆಳೆದವು. ನಂತರ ಬಂದ ಕೊಡಗಿನ ಗೌರಮ್ಮ, ಶ್ಯಾಮಲಾದೇವಿ ಬೆಳಗಾಂವ್‌ಕರ್ ರವರ ಬರವಣಿಗೆಗಳಲ್ಲಿ ಹೆಣ್ಣಿನ ಬದುಕಿನ ಸಮಸ್ಯೆಗಳ ಚಿತ್ರಣವಿದೆ. ಅವಳ ನೋವು ಅಸಹನೆಗಳು ಇವರ ಕತೆಗಳಲ್ಲಿ ವ್ಯಕ್ತವಾಗಿವೆ. ನವೋದಯದ ಮತ್ತೋರ್ವ ಲೇಖಕಿಯಾದ ಎಚ್.ವಿ. ಸಾವಿತ್ರಮ್ಮನವರ 'ಸೀತೆ, ರಾಮ, ರಾವಣ' ಹಾಗೂ 'ವಿಮುಕ್ತಿ' ಕಾದಂಬರಿಗಳು ಆಧುನಿಕ ಸ್ತ್ರೀ ಮನೋಧರ್ಮದಿಂದ ಸೀತೆಯ ಮನಹೊಕ್ಕು ನೋಡುವ ಪ್ರಯತ್ನಗಳಾಗಿವೆ. ಎಚ್.ವಿ ಸಾವಿತ್ರಮ್ಮನವರ 'ಪಶ್ಚಾತ್ತಾಪ' ಮತ್ತು 'ಮೇನಕೆ' ಕತೆಗಳಲ್ಲಿ ಪುರುಷ ಪ್ರಧಾನ ನಿಲುವುಗಳಿಗೆ ಉತ್ತರಿಸುವ ಚಾಕಚಕ್ಯತೆಯಿದೆ. ಗಂಡ ಏನೂ ಮಾಡಿದರೂ ಒಪ್ಪಿಕೊಳ್ಳಬೇಕೆಂಬ ಅಂಶಗಳನ್ನು 'ಪಶ್ಚಾತ್ತಾಪ' ಮತ್ತು 'ಮೇನಕೆ' ಕತೆಯ ನಾಯಕಿಯರು ನಿರಾಕರಿಸುತ್ತಾರೆ.

**ಪ್ರಗತಿಶೀಲ** : ಈ ಕಾಲಘಟ್ಟವು ನವೋದಯ ಸಾಹಿತ್ಯ ಮಾರ್ಗದಿಂದ ಹೊರಬಂದು ಹೊಸ ಆಲೋಚನೆಗಳೊಂದಿಗೆ ತೆರೆದುಕೊಂಡಿತು. ಸಮಾಜದಲ್ಲಿರುವ ಬಡವ-ಶ್ರೀಮಂತ, ಕೂಲಿಕಾರ-ಬಂಡವಾಳಗಾರ, ಜೀತಗಾರ-ಜಮೀನ್ದಾರ ಮೊದಲಾದ ವರ್ಗ ಅಸಮಾನತೆಗಳ ವಿಷಯವಾಗಿ ಜಾಗೃತಿ ಮೂಡಿಸುವುದು ಸಮಾನತೆಗಾಗಿ ತುಡಿಯುವುದು ಸಾಹಿತ್ಯದ ಮುಖ್ಯ ಅಂಶವಾಗಿತ್ತು. ಪ್ರಗತಿಶೀಲ ಸಾಹಿತ್ಯವು ಸ್ತ್ರೀ-ಪುರುಷರ ಅಸಮಾನತೆಯ ಬಗ್ಗೆ ಯಾವ ಧೋರಣೆಯನ್ನು ತಳೆಯಿತು? ಎಂಬುದು ಇಲ್ಲಿ ಗಮನಿಸಬೇಕಾದ ಅಂಶವಾಗಿದೆ. ಪ್ರಗತಿಶೀಲ ಸಾಹಿತ್ಯವು ಕನ್ನಡದಲ್ಲಿ ಬೆಳೆಯಲು ದಾರಿ ತೋರಿದ ಅ.ನ.ಕೃಷ್ಣರಾಯರು ಸ್ತ್ರೀ ಪಾತ್ರಗಳನ್ನು ಕಪ್ಪು-ಬಿಳುಪು ಮಾದರಿಯಲ್ಲಿ ಚಿತ್ರಿಸುತ್ತಾರೆ. ಸಂಸಾರಸ್ಥೆ ಇಲ್ಲವೇ ಸೂಳೇ ಇವೇ ಇವರ ಕಾದಂಬರಿಗಳಲ್ಲಿ ಪ್ರಧಾನ ಪಾತ್ರಗಳಾಗಿ ಗೋಚರವಾಗುತ್ತವೆ. ಹೆಣ್ಣಿನ ವಿಷಯದಲ್ಲಿ ಸಾಂಪ್ರದಾಯಿಕ ಮೌಲ್ಯಗಳಿಗೆ ಹೆಚ್ಚು ಒತ್ತು ನೀಡುತ್ತಾರೆ. ಆದರೆ ಬಸವರಾಜ ಕಟ್ಟೀಮನಿ, ನಿರಂಜನ, ಚದುರಂಗ, ವ್ಯಾಸರಾಯ ಬಲ್ಲಾಳರ ತ'.ರಾ.ಸು. ಕೃತಿಗಳಲ್ಲಿ ಸ್ತ್ರೀಯರ ಸ್ಥಿತಿ-ಗತಿಗಳ ಬಗೆಗೆ ಅನುಕಂಪವಿದೆ. ಸ್ತ್ರೀಸುಧಾರಣೆ ಮತ್ತು ಸ್ತ್ರೀ ಜಾಗೃತಿಗೆ ಒತ್ತು ನೀಡುತ್ತಾರೆ. ಇವರೆಲ್ಲರೂ ಕತೆ, ಕಾದಂಬರಿಗಳನ್ನು ಸಾಹಿತ್ಯ ಪ್ರಕಾರವಾಗಿ ಆಯ್ದುಕೊಂಡು ಸಾಮಾಜಿಕ ಹಿನ್ನೆಲೆಯಲ್ಲಿ ಹೆಣ್ಣಿನ ಪಾತ್ರ ಚಿತ್ರಣಕ್ಕೆ ತೊಡಗಿದರೂ ಕೌಟುಂಬಿಕ ನೆಲೆಯನ್ನು ಹೊರತುಪಡಿಸಿ ಸ್ತ್ರೀಯ ಸ್ವಾತಂತ್ರ್ಯವನ್ನು ಚಿತ್ರಿಸುವ ದಾರಿ ಕಾಣಲಿಲ್ಲ. ಇವರ ಕಾದಂಬರಿಗಳಲ್ಲಿ ಮಹಿಳೆಯರು ಉದ್ಯೋಗಸ್ಥರಾಗಿದ್ದರೂ ಪಾತಿವ್ರತ್ಯ ಧರ್ಮ, ಕನ್ಯತ್ವಗಳನ್ನು ಕಾಪಾಡಿಕೊಳ್ಳಬೇಕೆಂಬುದು ಇವರ ಅಭಿಲಾಷೆಯಾಗಿತ್ತು.

ಪ್ರಗತಿಶೀಲ ಕಾಲಘಟ್ಟದಲ್ಲಿ ಬಂದ ತ್ರಿವೇಣಿ, ಎಂ.ಕೆಇಂದಿರಾ ಮತ್ತು ಅನುಪಮಾ ನಿರಂಜನರ ಬರವಣಿಗೆಗಳಲ್ಲಿ ಸ್ತ್ರೀಪಾತ್ರಗಳು ಶಿಕ್ಷಣಕ್ಕೆ ಮತ್ತು ಉದ್ಯೋಗಕ್ಕೆ ತೆರೆದುಕೊಂಡರೂ ಪುರುಷ ವ್ಯವಸ್ಥೆಯಲ್ಲಿ ಕುಟುಂಬ, ವಿವಾಹಗಳಿಗೆ ಬಂಧಿಯಾಗಿ ಅಲ್ಲಿಯೇ ಜೀವನ ಸವೆಸಬೇಕಾದ ಅನಿವಾರ್ಯತೆಯನ್ನು ಚಿತ್ರಿಸುತ್ತವೆ.

**ನವ್ಯಕಾಲಘಟ್ಟ** : ನವ್ಯ ಸಾಹಿತ್ಯವು ಹೆಚ್ಚು ಪುರುಷ ಕೇಂದ್ರಿತವಾಗಿದ್ದು, ತಮ್ಮ ಏಕಾಂಗಿತನ, ಸಾಂಪ್ರದಾಯಿಕತೆಯಿಂದ ಹೊರಬರುವ ತುಡಿತ, ವೈಯಕ್ತಿಕತೆ, ಅಪರಿಪೂರ್ಣತೆ ಈ ಅಂಶಗಳಿಗೆ ಹೆಚ್ಚು ಒತ್ತು ಬಿದ್ದುದ್ದರಿಂದ ಹೆಣ್ಣಿನ ಸಮಸ್ಯೆಗಳು ಈ ಘಟ್ಟದಲ್ಲಿ ಅಂಚಿಗೆ ಸರಿಯಿತು. ಸಾಹಿತ್ಯ ಕೃತಿಗಳಲ್ಲಿ 'ನಾಯಕ'ನ ಹೋರಾಟ ತೊಳಲಾಟಗಳೇ ಪ್ರಧಾನವಾಗಿ ಚಿತ್ರಿತವಾದವು. ಅನಂತಮೂರ್ತಿ, ಲಂಕೇಶ್, ಕೃಷ್ಣ ಆಲನಹಳ್ಳಿ, ಶಾಂತಿನಾಥ ದೇಸಾಯಿ ರಾಮಚಂದ್ರ ಶರ್ಮ ಮೊದಲಾದವರ ಕತೆ ಕಾದಂಬರಿಗಳಲ್ಲಿ ಹೆಣ್ಣು ಪುರುಷನ ಲೈಂಗಿಕ ತೃಷೆಯನ್ನು ತೀರಿಸಿ ಅವನನ್ನೆ ಪರಿಪೂರ್ಣನನ್ನಾಗಿಸುವ ವಸ್ತುವಾಗಿ ಚಿತ್ರಿತಳಾಗಿದ್ದಾಳೆ. ಮುಸ್ಸಂಜೆ ಕಥಾ ಪ್ರಸಂಗ, ಕಿರಗೂರಿನ ಗಯ್ಯಾಳಿಗಳು ನವ್ಯದಾಚೆ ನಿಂತು ಗಟ್ಟಿ ಸ್ತ್ರೀ ಪಾತ್ರಗಳನ್ನು ಚಿತ್ರಿಸುವಲ್ಲಿ ಯಶಸ್ವಿಯಾಗಿವೆ.

ಈ ಕಾಲದಲ್ಲಿ ಬರೆಯಲಾರಂಭಿಸಿದ ವೀಣಾಶಾಂತೇಶ್ವರ ರಾಜಲಕ್ಷ್ಮಿ ಎನ್.ರಾವ್‌ರವರ ಕೃತಿಗಳಲ್ಲಿ ಹೆಣ್ಣಿನ ಮಾನಸಿಕ ತೊಳಲಾಟಗಳು ಶಕ್ತವಾಗಿ ಅಭಿವ್ಯಕ್ತವಾಗಿವೆ. ಇವರ ಕೃತಿಗಳಲ್ಲಿ ಸ್ತ್ರೀಯರು ವಿದ್ಯಾವಂತ ಹಾಗೂ ಉದ್ಯೋಗಸ್ಥ ಮಹಿಳೆಯರಾಗಿ ಚಿತ್ರಿತರಾಗಿದ್ದಾರೆ. ಸ್ವತಂತ್ರವಾಗಿ ಜೀವನವನ್ನು ನಡೆಸಬೇಕೆಂದು

ಹೊರಟರೂ ಅಂತಿಮವಾಗಿ ಪುರುಷಪ್ರಧಾನ ಚಿಂತನೆಗಳಿಗೆ ತಲೆಬಾಗುತ್ತಾರೆ.

**ನವ್ಯೋತ್ತರ ಸಾಹಿತ್ಯದಲ್ಲಿ ಮಹಿಳಾ ಸಂವೇದನೆ**

೧೯೭೦-೮೦ ರ ದಶಕದಲ್ಲಿ ಆರಂಭವಾದ ನವ್ಯೋತ್ತರ ಸಾಹಿತ್ಯವು ಹಲವು ವಿಶೇಷಗಳಿಂದ ಕೂಡಿದೆ. ಇಲ್ಲಿಯವರೆಗೂ ಭಾರತೀಯ ಸಾಮಾಜಿಕ ವ್ಯವಸ್ಥೆ ರೂಪಿಸಿದ ಕಟ್ಟುಪಾಡುಗಳಿಗೆ ಒಳಗಾಗಿ ಅಂತಃಸತ್ವ ಆತ್ಮವಿಶ್ವಾಸವನ್ನು ಕಳೆದುಕೊಂಡ ಶೋಷಿತ ವರ್ಗವು ಬಂಡಾಯದ ರೂಪದಲ್ಲಿ ತಲೆಯೆತ್ತಿದ ಕಾಲವಿದು.

ಶತಶತಮಾನಗಳಿಂದಲೂ ಅನುಭವಿಸಿದ ಯಾತನೆಗಳನ್ನು ಯಾವುದೇ ಭಯವಿಲ್ಲದೆ ನಿಸ್ಸಂಕೋಚವಾಗಿ ಅಭಿವ್ಯಕ್ತಿಸಿದ ಕಾಲವಿದು. ದಲಿತರು, ಮುಸ್ಲಿಂರು ಮತ್ತು ಮಹಿಳೆಯರ ಸಂವೇದನೆಗಳು ಉಚ್ಛ್ರಾಯ ಸ್ಥಿತಿಗೇರಿದ ಕಾಲವಿದು. ಇಲ್ಲಿಯವರೆಗೂ ಅನುಭವಿಸಿಕೊಂಡು ಬಂದಿದ್ದ ಅಂತರಾಳದಲ್ಲಿ ಅಡಗಿದ್ದ ಅವಮಾನ ಅಸಹನೆ, ನೋವು, ಆಕ್ರೋಶಗಳು ಜ್ವಾಲಾಮುಖಿಯಂತೆ ಸಿಡಿದ ಕಾಲವಿದು. ಸ್ತ್ರೀಯರು ಯಾವ ಸಂಕೋಚಕ್ಕೂ ಒಳಗಾಗದೇ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ತಮಗಾಗುತ್ತಿರುವ ದೌರ್ಜನ್ಯಗಳನ್ನು ಬಯಲಿಗೆಳೆದರು. ಹೆಚ್ಚು ಹೆಚ್ಚು ಮಹಿಳೆಯರು ತಾವು ಬಂದ ಸಾಮಾಜಿಕ ಹಿನ್ನೆಲೆಯಿಂದ ತಮಗಾಗುತ್ತಿರುವ ಅನ್ಯಾಯಗಳನ್ನು ಸಾಹಿತ್ಯದ ಮೂಲಕ ಅನಾವರಣಗೊಳಿಸಿದರು. ಈ ಕಾಲದಲ್ಲಿ ಕಾವ್ಯ, ಕತೆ, ಕಾದಂಬರಿ ಪ್ರಕಾರಗಳಲ್ಲಿ ಮಹಿಳಾ ಸಾಹಿತ್ಯ ರಚನೆಯಾಯಿತು.

ಸ್ತ್ರೀಯರು ತಮ್ಮ ಆಲೋಚನೆಗಳನ್ನು ಕಾವ್ಯದ ಮೂಲಕ ಗಟ್ಟಿ ನಿಲುವುಗಳೊಂದಿಗೆ ಅಭಿವ್ಯಕ್ತಿಸಿದರು. ಪೌರಾಣಿಕ ಸ್ತ್ರೀಪಾತ್ರಗಳನ್ನು ಸ್ತ್ರೀ ದೃಷ್ಟಿಕೋನದಿಂದ ತಮ್ಮ ಕಾವ್ಯಗಳಲ್ಲಿ ಅಭಿವ್ಯಕ್ತಿಸಿದರು. ಸೀತೆ, ಸಾವಿತ್ರಿ, ಶಕುಂತಲೆ, ಅಹಲ್ಯೆ, ಅಮೃತಮತಿ, ದ್ರೌಪದಿ ಮೊದಲಾದವರ ಅಂತರಂಗದ ತೊಳಲಾಟಕ್ಕೆ ಕನ್ನಡಿ ಹಿಡಿದರು. ಪಾತಿವ್ರತ್ಯದ ಹೆಸರಿನಲ್ಲಿ ಅವರಿಗಾದ ಅನ್ಯಾಯಗಳನ್ನು ತೆರೆದು ತೋರಿಸಿದರು.

> ನನಗೆ ಗೊತ್ತು! ಮತ್ತೆ ಗೌತಮನ ಸರ್ಪ
> ಹೆಡೆಯೆತ್ತಲಾರದು । ನನ್ನೊಳಗೆ ಏನನ್ನೂ ಬಿತ್ತಲಾರದು
> ರಾಮಸ್ಪರ್ಶಕೆ । ಶಿಲೆ ಸ್ಫೋಟವಾಗಿದೆ ಅಷ್ಟೇ ।
> ಹೆಣ್ಣಾಗಲಿಲ್ಲ
>
> -ಸುಕನ್ಯಾಮಾರುತಿ – ಅಹಲ್ಯೆ.
>
> ಇದು ಜೀವ : ಪ್ರೇಮ, ಕಾಮ, ಮೋಹ
> ಒಳಗೊಂಡದ್ದು
> ಮೈಯ ಹಸಿವಿಗೆ ಜನ್ಮಾಂತರಗಳಿಲ್ಲ
> ಬಂಧವಿಲ್ಲ ಈ ಪಾಡುಗಳಿಗೆ । ಹೊರುವ ಪಾಪಗಳಿಲ್ಲ
> ಹಸಿವಿನೆದುರು ಏನಿಲ್ಲ
>
> -ಎಚ್.ಎಲ್.ಪುಷ್ಪ –ಅಮೃತಮತಿಯ ಸ್ವಗತ.

ಗೌತಮ, ಯಶೋಧರರಂತಹ ಗಂಡಸರ ದೌರ್ಬಲ್ಯಗಳನ್ನು ಮುಚ್ಚಿಟ್ಟು ಎಲ್ಲದಕ್ಕೂ ಹೆಣ್ಣನ್ನು ಗುರಿಯಾಗಿಸುವ ಸಮಾಜದ ಪಕ್ಷಪಾತ ಧೋರಣೆಯನ್ನು ಈ ಲೇಖಕಿಯರು ಈ ಕವಿತೆಗಳ ಮೂಲಕ ಪ್ರಶ್ನಿಸುತ್ತಾರೆ.

> "ಶಕುಂತಲಾ ನಂಬಿಸಿ, ಮಜಾಮಾಡಿ
> ಮತ್ತೆ ಕೈಕೊಟ್ಟ
> ದುಷ್ಯಂತ ತಿರುಗಿ ಬಂದಾಗ ನೀನು ಒಂದು ಶಾಪ
> ಕೊಡಬಾರದಿತ್ತೇ?"
>
> -ಭಾಗ್ಯ –ಶಾಪವಾಗಿವೆ ಸ್ತ್ರೀಕುಲಕೆ

ವ್ಯವಸ್ಥೆಯ ವಿರುದ್ಧ ಪ್ರತಿಭಟನೆಯಿದೆ. ಮಹಿಳೆ ಇಷ್ಟೆಲ್ಲ ಜಾಗೃತಳಾಗಿದ್ದರೂ ಯಾವ ಪರಿವರ್ತನೆಯೂ ಆಗುತ್ತಿಲ್ಲವೆಂಬ ಹತಾಶೆಯಿದೆ. ಇಷ್ಟು ಕಾಲ ಸಮಾಜ ಹೆಣ್ಣಿಗೆ ಹಾಕಿರುವ ಸಂಕೋಲೆಗಳನ್ನು ಬಿಡಿಸಿಕೊಳ್ಳುವ ಯತ್ನ ಈ ಕವಿತೆಗಳಲ್ಲಿದೆ. ಗಂಡಿನ ಕಾಮಕ್ಕೆ ಬಲಿಯಾಗಬೇಕಾದ ಹೆಣ್ಣಿನ ಅಸಹಾಯಕತೆಯಿದೆ. ಹಾಗೆಯೇ ಗಂಡಿಗೆ ಪರಾವಲಂಬಿಯಾಗದೆ ಸ್ವತಂತ್ರವಾಗಿ ಸ್ತ್ರೀಯರು ಬಾಳಬೇಕೆಂಬ ಇಚ್ಛೆ ಮಹಿಳಾ ಕವಯತ್ರಿಯರಲ್ಲಿದೆ.

ಸುಕನ್ಯಾ, ಶಶಿಕಲಾವಸ್ತ್ರದ, ಎಂ.ಆರ್.ಕಮಲ, ಪ್ರತಿಭಾನಂದಕುಮಾರ್, ವಿಜಯಾ, ವಿಜಯಾದಬ್ಬೆ, ಹೇಮಾ ಪಟ್ಟಣಶೆಟ್ಟಿ, ಭಾಗ್ಯ, ಮಾಲತಿ ಪಟ್ಟಣಶೆಟ್ಟಿ ಮೊದಲಾದ ಕವಯತ್ರಿಯರು ಹಳೆಯ ಮೌಲ್ಯಗಳನ್ನು ಪ್ರಶ್ನಿಸುತ್ತಾ ಹೆಣ್ಣು ಸಶಕ್ತಳಾಗಿ ಸಮಾಜದಲ್ಲಿ ಸ್ವಾವಲಂಬಿಯಾಗಿ ಬದುಕುವ ಆಶೋತ್ತರಗಳನ್ನು ಬಿತ್ತುತ್ತಾರೆ.

ನೇಮಿಚಂದ್ರ, ವೈದೇಹಿ, ಬಿ.ಟಿ. ಲಲಿತಾನಾಯಕ್, ಸಾರಾ ಅಬೂಬಕ್ಕರ್, ಬಿ.ಟಿ. ಜಾಹ್ನವಿ ಮೊದಲಾದ ಮಹಿಳೆಯರು ಗದ್ಯ ಸಾಹಿತ್ಯದ ಮೂಲಕ ಇತ್ತೀಚಿನ ಸ್ತ್ರೀಯರ ಮನೋಭಾವಗಳನ್ನು ಚಿತ್ರಿಸಿದ್ದಾರೆ. ನೇಮಿಚಂದ್ರರ ಕತೆಗಳು ಹೆಣ್ಣಿನ ಬಾಳಿನಲ್ಲಿ ಹೊಸ ಭರವಸೆಯನ್ನು, ಬದುಕುವ ಆಸೆಯನ್ನು ಚಿಗುರಿಸುತ್ತವೆ. ವೈದೇಹಿಯವರ ಕವಿತೆಗಳಲ್ಲಿ ಸ್ತ್ರೀಯ ಮನದಾಳದ ನೋವು ಅಭಿವ್ಯಕ್ತವಾಗಿದೆ. 'ಅಡುಗೆ ಮನೆಯ ಹುಡುಗಿ', 'ನೋಡಬಾರದು ಚೀಲದೊಳಗನು', 'ತಿಳಿಸಾರು' ಮೊದಲಾದ ಕವಿತೆಗಳು ಸ್ತ್ರೀ ಸಂವೇದನೆಗಳಿಂದ ಕೂಡಿವೆ. ಅಕ್ಕು, ಒಗಟು ನಂತಹ ಕತೆಗಳು ಮತ್ತು ಅಸ್ಪೃಶ್ಯರು ನಂತಹ ಕಾದಂಬರಿಯಲ್ಲಿ ಹೆಣ್ಣಿನ ಮನೋಲೋಕವನ್ನು ಅಭಿವ್ಯಕ್ತಿಸಿದ್ದಾರೆ.

ಮುಸ್ಲಿಂ ಸಮಾಜದ ಧಾರ್ಮಿಕ ಮತ್ತು ಸಾಮಾಜಿಕ ಕಟ್ಟುಪಾಡುಗಳು ಹೆಣ್ಣಿನ ಬದುಕಿನ ಮೇಲೆ ಉಂಟು ಮಾಡಿರುವ ಆಘಾತಗಳನ್ನು ಸಾರಾ ಅಬೂಬಕ್ಕರ್ ರವರ ಕತೆ ಕಾದಂಬರಿಗಳು ಮನೋಜ್ಞವಾಗಿ ಚಿತ್ರಿಸುತ್ತವೆ. ಸಾರಾ ಅಬುಬಕ್ಕರ್‌ರವರ 'ಸಹನಾ', 'ವಜ್ರಗಳು', 'ಚಂದ್ರಗಿರಿಯ ತೀರದಲ್ಲಿ' ಕಾದಂಬರಿಗಳು ಮುಸ್ಲಿಂ ಮಹಿಳೆಯರ ಜೀವನವನ್ನು ಪರಿಣಾಮಕಾರಿಯಾಗಿ ಚಿತ್ರಿಸಿವೆ.

ದಲಿತ – ಬಂಡಾಯ ಕಾಲಘಟ್ಟದಲ್ಲಿ ಹೆಣ್ಣಿಗೆ ಹೊರಿಸಲಾಗಿರುವ ಪವಿತ್ರತೆ ಮತ್ತು ಪಾತಿವ್ರತ್ಯಗಳು ಪದ್ಯ ಮತ್ತು ಗದ್ಯ ಬರವಣಿಗೆಗಳಲ್ಲಿ ಪರಿಣಾಮಕಾರಿಯಾಗಿ ಪ್ರಶ್ನಿಸಲ್ಪಟ್ಟಿವೆ. ಸಾಂಪ್ರಾದಾಯಿಕ ಮೌಲ್ಯಗಳನ್ನು ಹೊತ್ತು ನಿಂತ ಪತಿವ್ರತೆಯರ ಪಾಡುಗಳನ್ನು ಮಹಿಳಾ ಮನೋಭಾವದಿಂದ ಚಿತ್ರಿಸುತ್ತಾರೆ. ಬಿ.ಟಿ. ಲಲಿತನಾಯಕ್‌ರ 'ಗತಿ' ಕಾದಂಬರಿಯಲ್ಲಿ ಸೋನಿ ಪಂಚರ ಎದುರಿನಲ್ಲಿಯೇ ಗಂಡನನ್ನು ತ್ಯಜಿಸುವ ತೀರ್ಮಾನ ತೆಗೆದುಕೊಳ್ಳುತ್ತಾಳೆ.

ಬಿ.ಟಿ. ಜಾಹ್ನವಿಯವರ ಕತೆಗಳಲ್ಲಿಯೂ ಮಹಿಳಾ ಬದುಕಿನ ಹೊಸ ಆಶಯಗಳು ತೆರೆದುಕೊಳ್ಳುತ್ತವೆ. 'ವಿಮುಖ' ಕತೆಯಲ್ಲಿ ಬರುವ ಮೈತ್ರ ಆಧುನಿಕ ತಲೆಮಾರಿನ ಓದಿದ ಉದ್ಯೋಗಸ್ಥ ಹುಡುಗಿ ರಘು ಜೊತೆಯಲ್ಲಿದ್ದುಕೊಂಡೇ ತನಗೆ ಮಾಡಿದ ನಯವಂಚಕತನಕ್ಕೆ ತಕ್ಕ ಪಾಠ ಕಲಿಸುವಲ್ಲಿ ಯಶಸ್ವಿಯಾಗುತ್ತಾಳೆ. ಗೀತಾ ನಾಗಭೂಷಣ್ ರವರ 'ಹಸಿಮಾಂಸ ಮತ್ತು ಹದ್ದುಗಳು','ಬದುಕು' ಮೊದಲಾದ ಕಾದಂಬರಿಗಳಲ್ಲಿ ದಲಿತ ಹೆಣ್ಣಿನ ಬದುಕಿನ ಹೋರಾಟಗಳನ್ನು ಸಮರ್ಥವಾಗಿ ಚಿತ್ರಿಸಿವೆ.

ಆಧುನಿಕ ಸಮಾಜದಲ್ಲಿ ಹೆಣ್ಣು ಸಾಂಪ್ರದಾಯಿಕ ಜೀವನ

ವಿಧಾನಕ್ಕೆ ಕಟ್ಟು ಬೀಳದೆ ತಮಗೆದುರಾಗುವ ಸಮಸ್ಯೆಗಳನ್ನು ಬುದ್ಧಿವಂತಿಕೆಯಿಂದ ಜಾಣತನದಿಂದ ಬಿಡಿಸಿಕೊಂಡು ಸಶಕ್ತವಾಗಿ ಬೆಳೆಯಲು ಎಂಬತ್ತರ ದಶಕದ ಮಹಿಳಾ ಕೃತಿಗಳು ಮಾರ್ಗದರ್ಶಕವಾಗಿವೆ.

**ಪರಾಮರ್ಶನ ಗ್ರಂಥಗಳು:**


೧. ಹಾಲತಿ ಸೋಮಶೇಖರ್ ಮಹಿಳಾ ಚಳುವಳಿ ೨೦೦೭, ವಿಸ್ಮಯ ಪ್ರಕಾಶನ ಮೈಸೂರು.
೨. ವಿವಿಧ ಲೇಖಕರು ಕನ್ನಡ ಸಾಹಿತ್ಯದಲ್ಲಿ ಸ್ತ್ರೀಸಂವೇಧನೆಯ ಸ್ವರೂಪ ೧೯೯೩, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
೩. ವಿವಿಧ ಲೇಖಕರು ಕನ್ನಡ ಸಾಹಿತ್ಯ ಮತ್ತು ಸ್ತ್ರೀವಾದಿ ಚಿಂತನ ೧೯೯೩, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
೪. ಸಂ: ಸಬೀಹಾ ಭೂಮಿಗೌಡ ಮತ್ತು ಮಲ್ಲಿಕಾಘಂಟಿ ಕನ್ನಡ ಸಾಹಿತ್ಯ ಮತ್ತು ಮಹಿಳೆ ೨೦೦೬, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
೫. ವಿಜಯಶ್ರಿ ಸಬರದ ಸಾಹಿತ್ಯ ಸಂವಹನ ೨೦೦೨, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
೬. ಎಚ್.ಎಸ್. ಶ್ರೀಮತಿ ಸೇರಿಕೊಂಡ ಎಳೆಗಳು ೨೦೦೩ ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು.
೭. ವಿಜಯಾದಬ್ಬೆ ಮಹಿಳೆ, ಸಾಹಿತ್ಯ, ಸಮಾಜ ೧೯೮೯ ರಚನಾ ಪ್ರಕಾಶನ ಮೈಸೂರು.
೮. ಮಹಿಳಾ ಅಧ್ಯಯನ ಸಂ. ಹೆಚ್.ಎಸ್. ಶ್ರೀಮತಿ ಮಹಿಳಾ ಅಧ್ಯಯನ ೨೦೦೦ ಕ.ವಿ.ವಿ. ಹಂಪಿ